ಬೆಸೆದ ಆತ್ಮಿಕದ ಎಳೆ. ಹಸುಗೂಸಿನ ಮೈಯಲ್ಲಿ ಹರಿದಾಡುವ ಬೆಳಕಿನ ಎಳೆ. ನಿಸರ್ಗದ ಹಸಿರಿನ ತುಂಬ ತುಯ್ಯುವ ಅಲೆಗಳು ಹೊರಹಾಕುವ ನಗೆಯ ಎಳೆ. ಮಳೆಗಾಲದಲ್ಲಿ ಕಪ್ಪು ಮೋಡಗಳ ಮಧ್ಯೆ ಬಣ್ಣ ಗೀಚಿದಂತೆ ಛಕ್ಕೆಂದು ಕಂಡು ಕಣ್ಮರೆಯಾಗುವ ಬೆಂಕಿಯ ಎಳೆ. ಹರಿಯದಂತೆ ಕರಿಮಣಿ, ಹವಳ, ಮುತ್ತುಗಳನ್ನು ಬರಸೆಳೆದು ಗಟ್ಟಿಯಾಗಿ ಹಿಡಿದಿಟ್ಟ ಎಳೆ. ತಂದೆ, ತಾಯಿ, ಅಣ್ಣ, ತಮ್ಮ, ಬಂಧು ಬಳಗವನ್ನು ಸುರಗಿಯ ಚರಿಗೆ ಸುತ್ತಿದಂತೆ, ಸುತ್ತಿ ಹಿಡಿದಿಟ್ಟ ಎಳೆ. ಬಿತ್ತಿದ, ಬಿತ್ತದೆ ಇರುವ ಭೂಮಿಯ ಅಂಚಿಗೆ ಬದುವಾಗಿ ಉಳಿದ ಶಾಶ್ವತ ಎಳೆ. ಹೊರಗಿನ ನಿಟ್ಟುಸಿರಿಗೆ ಪರ್ಯಾಯವಾದ, ಒಳ ಬದುಕಿಗೆ ಪ್ರಾಣದುಸಿರಾಗಿ ಕಂಡ ಎಳೆ. ಸಂಸಾರದ ಆಂತರಿಕ ಅಸಮಾಧಾನಗಳನ್ನು ನಿಗ್ರಹಿಸುವ ಗರುಡರೇಖೆಯಂತಹ ಎಳೆ. ಪ್ರತಿ ಕತೆಗೂ ಉಪಕತೆಯಾಗಿ ಬರುವ ಕಲೆಯ ಒಳ ಕುಸುರಿನ ಆಂತರಿಕ ಎಳೆ. ಬಡತನ ಸಿರಿತನಗಳ ಹಂಗಿಲ್ಲದ ತೆರೆದ ಋಣಾನುಬಂಧದ ಗಟ್ಟಿ ಎಳೆ. ಹುಟ್ಟಿದಾಗ, ಸತ್ತಾಗ ಅಂಗೈಯಗಲ ತೆರೆದು ಕಣ್ಣಾಗಿ ಕಂಡ ಜೀವಲೀಲೆಯ ಎಳೆ. ಈ ಎಳೆಗೆ ಹೆದರದ ಯಮನಿಲ್ಲ, ಈ ಎಳೆಯು ಬೇಡವೆನ್ನದ ಶಿವನಿಲ್ಲ. ಇದು ಯಾವ ನೂಲಿನ ಎಳೆಯೋ ಗೊತ್ತಿಲ್ಲ! ಈ ಎಳೆಯು ಇದ್ದದ್ದು ಎಲ್ಲ ಪ್ರಮಾಣಕ್ಕೂ ಸತ್ಯ! ಆಕೆ ನನ್ನ ಸುತ್ತಲೂ ಹಬ್ಬಿ ಹರಡಿದ ಹಸಿರು ತುಂಬಿದ ದಟ್ಟ ಕಾಡಿನ ಸಿರಿಯಾಗಿದ್ದಳು. ಸುತ್ತಲೂ ಮೈದಳೆದು ನೆಲಕ್ಕೆ ಹಾಸಿದ ಮೆತ್ತಗಿನ ಹುಲ್ಲರಾಶಿಯಾಗಿದ್ದಳು. ಕೈಗೆ ತಾಗುವ ಹೂಹಣ್ಣುಗಳ ಬುಟ್ಟಿಯಾಗಿದ್ದಳು. ಹೃದಯದ ಮೇಲೆ ತೆರೆದ ಕಣ್ಣಾಗಿದ್ದಳು. ಮೈಮನ ಪುಳಕಿಸುವ ಬೆರಳ ಸ್ಪರ್ಶವಾಗಿದ್ದಳು.

ಆಕೆ ನನ್ನ ಕೈಬೆರಳುಗಳನ್ನು ಹಿಡಿದು ಜೊತೆಜೊತೆಯಾಗಿ ಸಾಗಿದ್ದಳು. ತನ್ನ ಮಮತೆಯ ಬೆಳದಿಂಗಳು ಸುರಿಸಿದ್ದಳು. ಕಷ್ಟದಲ್ಲಿ ದೇವರದನಿಯಾಗಿ ಸಂತೈಸಿದ್ದಳು. ಮನಸ್ಸಿನ ತುಂಬ ನೆಮ್ಮದಿಯ ಉಸಿರಾಗಿ ಸುಳಿದಿದ್ದಳು. ಸದಾ ಚೆಂದಗಿನ ಗೊಂಬೆಯಾಗಿ ಕಂಡಿದ್ದಳು. ಮದುವೆಯ ಮಂಟಪ ನೋಡಿದಾಗೊಮ್ಮೆ ಬಣ್ಣದ ಆಲ್ಬಂನಂತೆ ಕಣ್ಣೆದುರು ಸರಿದುಹೋಗಿದ್ದಳು. ಮನೆಯ ಗೋಡೆಗಳ ಮೇಲೆ ಬಣ್ಣಬಣ್ಣದ ಕಣ್ಣು ಮಿಟುಕಿಸುವ ಬೆಳಕಾಗಿ ಉಕ್ಕಿದ್ದಳು.

★★★

ತಂಗಿಯ ನೆನಪುಗಳೇ ಹಾಗೆ... ಮಲೆನಾಡಿನ ಮಳೆ ಹೊಯ್ದಂತೆ. ಒಂದು ದಿನ ರಾತ್ರಿ ಕದ ಬಡಿದ ಶಬ್ದವಾಯ್ತು. ಯಾರೂ ಇರಲಿಕ್ಕಿಲ್ಲವೆಂದು ಸುಮ್ಮನಾದೆ. ಮತ್ತೆ ಕದ ಸಪ್ಪಳ ಮಾಡಿತು. ಸುಮ್ಮನಿದ್ದೆ. ಕದ ಬಡಿದ ಸಪ್ಪಳ ಕಡಿಮೆಯಾಗಲಿಲ್ಲ. ಹೋಗಿ ಕದ ತೆರೆದು ನೋಡಿದೆ. ತಂಪಾದ ಜೋರಾದ ಗಾಳಿ ತಂಗಿಯಂತೆ ಗಲ್ಲವನ್ನೇ ತಟ್ಟಿ, ಮನೆಯ ಒಳಗಡೆ ನುಗ್ಗಿತ್ತು.

ಒಂದು ದಿನ ರಾತ್ರಿ ಮಲಗಿದಾಗ ಬೆಳಕು ಹತ್ತಿ ಆರಿದಂತೆನಿಸಿತು. ಎದ್ದು ದೇವರ ಕೋಣೆಯ ಎದುರು ನಿಂತು ಕಣ್ಣುಜ್ಜುತ್ತಿದ್ದಾಗ, ದೇವರ ಎದುರಿನ ದೀಪ ಆರಹತ್ತಿತ್ತು. ಬತ್ತಿ ಸರಿ ಮಾಡಿದಾಗ ದೀಪ ಬೆಳಗಹತ್ತಿತು. ಮತ್ತೆ ಬಂದು ಮಲಗಿದಾಗ ದೀಪ ಎದೆಯ ಮೇಲೆಯೇ ಹರಿದಾಡಿದಂತಾಗಿ ಎದ್ದು ನೋಡಿದಾಗ, ಮಗ್ಗುಲದಲ್ಲಿ ಮಲಗಿದ್ದ ತಂಗಿಯ ಕೈ ನನ್ನ ಎದೆಯ ಮೇಲಿತ್ತು.

ಒಂದು ದಿನ ರಾತ್ರಿ ಏನೋ ಕೂಗಿದಂತೆನಿಸಿ, ಕದ ತೆರೆದು ಹೊರಗೆ ಬಂದಾಗ, ಮನೆಯ ಮುಂದಿನ ಬೇವಿನ ಗಿಡದ ಹಸಿರು ಹಸಿ ಎಲರಿನ ಟೊಂಗೆಗಳು ಒಂದು ಮತ್ತೊಂದರ